ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 921/2020.

ಫ್ರಾ.ಸಾ.ಃ1
ಚಾ.ಸಾ.ಃ1

ಹೆಸರು ಃ ಅನಂತ ಕುಮಾರ್
ತಂದೆಯ ಹೆಸರು ಃ ಗೋವಿಂದ
ವಯಸ್ಸು ಃ 28 ವರ್ಷ
ಉದ್ಯೋಗ ಃ ಅರಣ್ಯ ವೀಕ್ಷಕ
ವಿಳಾಸ ಃ ಹುಣಸೂರು

... .................................................................................................... ...

ದಿನಾಂಕ 19 ನೇ ಮಾರ್ಚ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ನಾನು 2018 ರಿಂದ 2019 ರ ತನಕ ಮತ್ತಿಗೋಡು ಅರಣ್ಯ ಶಾಖೆ ಆನೆಚೌಕೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 28.04.2020 ರಂದು ನಾನು ಆನೆಚೌಕೂರು ವನ್ಯ ಜೀವಿವಲಯದ ಚೇಣಿ ಅಡ್ಲು ಆಯಿರಾಸುಳಿಯಲ್ಲಿ ಆನೆ ಪಹರೆ ಮಾಡುತ್ತಿದ್ದೆವು. ಆಗ ಸಂಜೆ 6.30 ಆಗಿತ್ತು . ನನ್ನ ಜೊತೆ ಚಾಸಾ 2 ಹಾಜರಿದ್ದೆವು. 2 ದಿನದ ಮೊದಲು ಕಳ್ಳಬಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದಿತ್ತು. ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ನಮ್ಮ ಮೇಲಾಧಿಕಾರಿ ಅಬಕಾರಿ ನೀರಿಕ್ಷಕರು ಅವರಿಗೆ ವಿಚಾರ ತಿಳಿಸಿ ಅವರ ದೂರವಾಣಿ ಸಂಖ್ಯೆಯನ್ನು ನಮಗೆ ನೀಡಿರುತ್ತಾರೆ. ನಾವು 6.45 ರ ಸಮಯದಲ್ಲಿ ಅಬಕಾರಿ ನೀರಿಕ್ಷಕರಿಗೆ ದೂರವಾಣಿ ಕರೆ ಮಾಡಿದೆವು. 15 ನಿಮಿಷದಲ್ಲಿ ಅವರು ಸ್ಥಳಕ್ಕೆ ಬಂದರು. ಸಂಜೆ 7.30 ರ ಸಮಯಕ್ಕೆ ನಾವು ಕಾಯುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಆಯಿರಾಸುಳಿ ಭಾಗದಿಂದ ಬಂದರು. ಅವರನ್ನು ನಾವು ಮಾತನಾಡಿಸಲು ಹೋದಾಗ ಓಡಲು ಪ್ರಯತ್ನಿಸಿದರು. ಆಗ ನಾವು ಅವರನ್ನು ಹಿಡಿದೆವು.

ಆರೋಪಿ 1 ರವರ ಕೈ ಯಲ್ಲಿ ಒಂದು ವೈರ್ ಬ್ಯಾಗ್ ಇತ್ತು. ಅದನ್ನು ಪರಿಶೀಲಿಸಿದಾಗ ಘಾಟು ವಾಸನೆ ಬಂತು. ಒಂದು ಪ್ಲಾಸ್ಟಿಕ್ ಕ್ಯಾನ್ ಇತ್ತು. ಅಬಕಾರಿ ನೀರಿಕ್ಷಕರು ಪರೀಶಿಲಿಸಿ ಅದು ಕಳ್ಳಬಟ್ಟಿ ಸಾರಾಯಿ ಎಂದು ತಿಳಿಸಿದರು. ಸದರಿ ಕ್ಯಾನ್ ನಿಂದ ಒಂದು ಬಾಟೆಲ್‌ಗೆ ಮಧ್ಯವನ್ನು ಸ್ಯಾಂಪಲ್‌ಗಾಗಿ ತೆಗೆಯಲಾಯಿತು. ಮತ್ತೊಬ್ಬ ವ್ಯಕ್ತಿಯನ್ನು ವಿಚಾರಿಸಿದಾಗ ಅವರ ಹೆಸರು ಸಂಜು ಎಂದು ತಿಳಿಸಿದರು. ಇಬ್ಬರು ಆರೋಪಿತರು ತಾವು ಕಳ್ಳಬಟ್ಟಿ ಸಾರಾಯಿಯನ್ನು ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದರು. ಆನಂತರ ಅಬಕಾರಿ ನೀರಿಕ್ಷಕರು ವಾಹನದ ಲೈಟ್ ಸಹಾಯದಿಂದ ಮಹಜರ್ ಬರೆದರು ನಾನು ಸಹಿ ಮಹಜರ್ ಗೆ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ರಾತ್ರಿ 7.30 ರಿಂದ 9.00 ರ ಸಮಯದಲ್ಲಿ ಮಾಡಲಾಯಿತು.

ಮಹಜರ್ ಅನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1 ಎ ಎಂದು ಗುರುತಿಸಲಾಯಿತು. ಬ್ಯಾಗ್ ನ್ನು ಮು. ಮಾ 1 ಎಂದು, ಪ್ಲಾಸ್ಟಿಕ್ ಕ್ಯಾನ್ ಅನ್ನು ಮು. ಮಾ 2 ಎಂದು, ಬಾಟೆಲ್ ಅನ್ನು ಮು. ಮಾ 3 ಎಂದು ಗುರುತಿಸಲಾಯಿತು. 2 ಫೋಟೋಗಳನ್ನು ನಿ ಪಿ 2 ಮತ್ತು ನಿ ಪಿ 3 ಎಂದು ಗುರುತಿಸಲಾಯಿತು. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು</u> :- ಅರೋಪಿತರ ಪರ ವಕೀಲರವರಿಂದ :-

ನಾನು ಆದಿನ ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲಾತಿ ನೀಡಿಲ್ಲ ಎಂದರೆ ಸರಿ. ನಾವು ಗಸ್ತು ಮಾಡುತ್ತಿದ್ದ ಸ್ಥಳದಲ್ಲಿ ಆರೋಪಿತರು ಬಂದಿರುತ್ತಾರೆ. ಮುಖ್ಯ ರಸ್ತೆಯಿಂದ ಘಟನಾ ಸ್ಥಳ ಸುಮಾರು 10 ಮೀ ದೂರ ಇದೆ. ಎಡತೊರೆಯಿಂದ ಆಯಿರಾಸುಳಿಗೆ ಹೋಗುವ ರಸ್ತೆಯಲ್ಲಿ ಘಟನೆ ನಡೆದಿದೆ. ಆಯಿರಾಸುಳಿಗೆ ಹೋಗುವ ರಸ್ತೆಯಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸ್ಥಳದಲ್ಲಿ ಗ್ರಾಹಕರು ಯಾರು ಇರಲಿಲ್ಲ ಎಂದರೆ ಸರಿಯಲ್ಲ. ಅರುಣ್ ಮಾಚಯ್ಯ ಹಾಗೂ ಸ್ವಾಮಿ ಎನ್ನುವವರ ತೋಟ ಹಾಗೂ ಲೈನ್ ಮನೆ ಇದೆ ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ರಸ್ತೆ ಅರಣ್ಯ ಪ್ರದೇಶಕ್ಕೆ ಸೇರಿದ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಯಾರಾದರೂ ಓಡಾಡಬಹುದು ಎಂದರೆ ಹಾಡಿ ಜನರು ಓಡಾಡುತ್ತಾರೆ. ಹಾಡಿಜನರ ಮನೆ ಅರ್ಧ ಕಿ.ಮೀ ದೂರದಲ್ಲಿದೆ ಎನ್ನುತ್ತಾರೆ. ಮು. ಮಾ 2 Sunflower ಎಣ್ಣೆ ತುಂಬುವ ಬಾಟೆಲ್ ಎಂದರೆ ಇರಬಹುದು ಎನ್ನುತ್ತಾರೆ. ಮು. ಮಾ 1 ರೀತಿಯ ವೈರ್ ಬ್ಯಾಗ್ ಗಳು ಹಾಡಿ ಜನರ ಮನೆಯಲ್ಲಿ ಇರಬಹುದು ಎಂದರೆ ನಾನು ನೋಡಿಲ್ಲ ಎನ್ನುತ್ತಾರೆ. ಮು. ಮಾ ರೀತಿಯ ವಸ್ತುಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸಿಗಬಹುದು ಎನ್ನುತ್ತಾರೆ.

ಮಹಜರ್ ನಲ್ಲಿ ನಮ್ಮ ಇಲಾಖೆಯವರನ್ನು ಹೊರತುಪಡಿಸಿ ಸಾರ್ವಜನಿಕರು ಯಾರು ಸಹಿ ಮಾಡಿಲ್ಲ ಎಂದರೆ ಸರಿ. ಮು. ಮಾ ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಮಹಜರ್‌ಗೆ ಕಚೇರಿಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ಮು. ಮಾ ಗಳನ್ನು ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮು. ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)